non-plan expenditure, involved in this case. There are similar proposals throughout the State. However, this issue will be re-examined during the next financial year."

ಎನ್ನತಕ್ಕಂಥ ಪಾಯಿಂಟ್ ಇದೆ. ನಾನು ಪುನಃ ಹೇಳುತ್ತೇನೆ. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಕ್ಲಿಯರ್ ಆಗಿದ್ದರೆ ನಾನಂ ಪ್ಲಾನಿಂಗ್ ಸೆಕ್ರೆಟರಿ ಮತ್ತು ಫೈನಾನ್ಸ್ ಸೆಕ್ರೆಟರಿಯವರನ್ನು ಕರೆಸಿ ಮಾತನಾಡುತ್ತೇನೆ.

SRI M. RAJASHEKARA MURTHY.—For the benefit of the House I must say that I have cleared the file.

MR. SPEAKER.—You can take note of it.

SRI MALLIKARJUNA M. KHARGE.—I have already stated that if it is cleared, I will call the Planning Secretary and the Finance Secretary.

ಶ್ರೀಮತಿ ಮೋಟಮ್ಮ.—ಫೈಲ್ ಎಲ್ಲಿ ಹೋಗಿದೆ. ಅದು ಬೇಕಲ್ಲ ?

ಅಧ್ಯಕ್ಷರು.—ಆ ಫೈಲ್ ಎಲ್ಲಿ ಇರಬೇಕೋ ಅಲ್ಲಿ ಇದೆ.

ಶ್ರೀಮತಿ ಮೋಟಮ್ಮ.—ಆ ಫೈಲ್ ಕ್ಲಿಯರ್ ಆಗಿದೆ ಎಂದು ಮಾಜಿ ಹಣಕಾಸಿನ ಸಚಿವರು ಹೇಳಿದ್ದಾರೆ. ಹಾಲಿ ರೆವಿನ್ಯೂ ಮಂತ್ರಿಗಳು ಆ ಫೈಲ್ ಇಲ್ಲ ಎಂದು ಹೇಳುತ್ತಿದ್ದಾರೆ. ಆ ಫೈಲ್ ಎಲ್ಲಿದೆ ಎನ್ನುವುದು ಬೇಕಲ್ಲ ?

ಅಧ್ಯಕ್ಷರು.—ರೂಟ್ ಮ್ಯಾಪ್‌ನಲ್ಲಿ ಹುಡುಕಿಕೊಂಡು.

Identification of Drought-prone Areas

284. SRI BABAGOUD PATIL (Kittur).— Will the Minister for Revenue be pleased to state

The factors that are considered for declaring a particular area as a drought area.

SRI M. MALLIKARJUNA KHARGE (Minister for Revenue).—

i) Rainfall
ii) Anewari (Average Crop yield)
iii) Availability of drinking water
iv) Availability of fodder
v) Employment to agricultural labourers.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.—ಮಾನ್ಯ ಅಧ್ಯಕ್ಷರೆ, ಬರಗಾಲ ಪೀಡಿತ ಪ್ರದೇಶ ವೆಂದು ಘೋಷಣೆ ಮಾಡಲು ಮಳೆ ಆಧಾರ ಎಂದು ಹೇಳಿದ್ದಾರೆ. ಕೆಲವು ಪ್ರದೇಶಗಳಲ್ಲಿ ಮಳೆ ಆಗದೆ ಬೀಜ ಬಿತ್ತನೆ ಮಾಡಿಲ್ಲ. ರಸಗೊಬ್ಬರ ಹಾಕಿಲ್ಲ. ಇನ್ನು ಕೆಲವು ಪ್ರದೇಶಗಳಲ್ಲಿ ಮಳೆ ಆಗಿದೆ. ಬೇಕಾದಷ್ಟು ಮಳೆ ಆಗಿದ್ದರೂ ಸಹ ಬೆಳೆ ಸರಿಯಾಗಿ ಆಗಿಲ್ಲ. ಕೆಲವು ಪ್ರದೇಶಗಳಲ್ಲಿ ಎರಡು ಮೂರು ತಿಂಗಳು ಮಳೆ ಆಗಿದೆ. ಹತ್ತಿ ಗಿಡಗಳಲ್ಲಿ ಹೂವು ಮತ್ತು ಕಾಯಿಗಳು ಎಲ್ಲಾ ಬಿದ್ದು ಹೋಗಿವೆ. ಆದರೂ ಮಳೆ ಆಧಾರವೇ ಬರಗಾಲ ಪೀಡಿತ ಎಂದು ಘೋಷಣೆ ಮಾಡಲು ಕಾರಣ ಎಂದು ಹೇಗೆ ಹೇಳುತ್ತೀರಿ ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಈಗ ಬರಗಾಲ ಪೀಡಿತ ಪ್ರದೇಶ ಯಾವು ಯಾವುದು ಎಂದು ಘೋಷಣೆ ಮಾಡಬೇಕಾದರೆ ಕೆಲವು ಸಾರಮ್ಸ್ ಇವೆ. ಅದು ನಮಗೂ ಗೊತ್ತಿದೆ. ಬೇಕಾದಾಗ ಮಳೆ ಆಗದಿದ್ದರೆ ಅಂದರೆ ಕಾಲಕ್ಕೆ ಸರಿಯಾಗಿ ಮಳೆ ಆಗದಿದ್ದರೆ, ಒಂದು ವೇಳೆ ಮಳೆ ಯಾದರೂ ತೊಂದರೆ ಆದರೆ ಅಂತಹ ಪ್ರದೇಶವನ್ನು ಕೂಡ ಬರಗಾಲ ಪೀಡಿತ ಪ್ರದೇಶ ಎಂದು ಘೋಷಣೆ ಮಾಡಿ ಪರಿಹಾರ ಕೊಡತಕ್ಕಂಥ ವ್ಯವಸ್ಥೆ ಇದೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.—ಅಲ್ಲಿ ಬರಗಾಲ ಪೀಡಿತ ಪ್ರದೇಶ ಎಂದು ಘೋಷಣೆ ಮಾಡಿಲ್ಲ. ಎರಡನೆಯದಾಗಿ ಆಣೆವಾರು ಪದ್ಧತಿ ಬ್ರಿಟಿಷರ ಕಾಲದಿಂದ ಬಂದಿದೆ. ಅದನ್ನೇ ಈಗಲೂ ಆಳವಡಿಸಿಕೊಂಡಿದ್ದಾರೆ ನಮ್ಮ ಪ್ರದೇಶದಲ್ಲಿ ಜೋಳ ಬೆಳೆಯುತ್ತಾರೆ ಎಂದು ರಿಕಾರ್ಡ್‌ನಲ್ಲಿ ಇದೆ. ಜೋಳವನ್ನು ನಿರ್ದಿಷ್ಟ ಪ್ರಮಾಣದಲ್ಲಿ ಬೆಳೆಯಬೇಕೆಂದಿಲ್ಲ. ಆದರೂ ಆಣೆವಾರು ಲೆಕ್ಕ ಮಾಡುತ್ತಾರೆ. ಆದು ಹೇಗೆ ? ನಮ್ಮ ಪ್ರದೇಶದಲ್ಲಿ ಮುಖ್ಯವಾಗಿ ಡಿ.ಸಿ.ಎಚ್. ಕಾಟನ್ ಈಗ ಜಾಸ್ತಿ ಬೆಳೆಯುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವ ಯಾವ ಪ್ರದೇಶದಲ್ಲಿ ಯಾವ ಯಾವ ಬೆಳೆ ಬೆಳೆಯುತ್ತಾರೋ ಅದರ ಆಧಾರದ ಮೇಲೆ ಆಣೆವಾರಿಯನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.—ಜೋಳ ಬೆಳೆಯುವುದು ಲಾಭದಾಯಕವಲ್ಲವೆಂದೂ ಈಗ ಕಡಿಮೆ ಮಾಡುತ್ತಿದ್ದಾರೆ. ಜೋಳ ಬೆಳೆಯಲಿಲ್ಲವೆಂದರೂ ಜೋಳವನ್ನೇ ಆಣೆವಾರಿ ಮಾಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಾಗೆ ಮಾಡುವುದಕ್ಕಾಗುವುದಿಲ್ಲ. ಹಾಗೇನಾದರೂ ಆಗಿದ್ದರೆ ನೀವು ನಿರ್ದಿಷ್ಟವಾಗಿ ಈ ತರಹ ಮಾಡಿದ್ದಾರೆಂದು ಹೇಳಿದರೆ, ಡೆಪ್ಯುಟಿ ಕಮಿಷನರ್‌ರವರಿಗೆ ಬೇಕಾದರೆ ನಾನು ಹೇಳಿ ಪುನ: ರಿಪೋರ್ಟ್ ತರಿಸಿಕೊಂಡು ಹೇಳುತ್ತೇನೆ. ಅಲ್ಲಿ ಬೆಳೆ ಇರಲಿಲ್ಲವೆಂದರೆ ಆದರ ಮೇಲೆ ಆಣೆವಾರಿ ಮಾಡುವುದಕ್ಕಾಗುತ್ತದೆಯೇ ? ಯಾವುದು ಕಲ್ಟಿವೇಷನ್ ಇದ್ದರೆ ಅದಕ್ಕೆ ಆಣೆವಾರಿ ಮಾಡುತ್ತಾರೆಯೇ ಹೊರತಾಗಿ ಬೇರೆಯದಕ್ಕೆ ಹೇಗೆ ಮಾಡುವುದಕ್ಕಾಗುತ್ತದೆ ?

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.—ಮೊದಲಿನಿಂದ ಜೋಳದ ಆಣೆವಾರಿ ಮಾಡುತ್ತಿರುವುದರಿಂದ ಈಗಲೂ ಜೋಳದ ಆಣೆವಾರಿ ಮಾಡುತ್ತೇವೆಂದು ಹೇಳುತ್ತಾರೆ. ಯಾವುದೋ ಒಂದು ಎಕರೆಯಲ್ಲಿ ಜೋಳವನ್ನು ಬೆಳೆದಿದ್ದರೆ, ಎಲ್ಲಾ ಕಡೆ ಜೋಳದ ಆಣೆವಾರಿ ತೆಗೆದುಕೊಳ್ಳುತ್ತಾರೆ. ಬೆಳೆ ತೆಗೆಯದೇ ಇದ್ದರೂ ಎಲ್ಲಾ ಹೊಲಗಳಿಗೂ ಆಣೆವಾರಿ ಮಾಡುತ್ತಾರೆ. ಈ ರೀತಿಯ ಸರ್ಕಾರದ ಧೋರಣೆಯಿಂದ ರೈತರಿಗೆ ಪಂಚನೆಯಾಗಿದೆಯೆಂದು ಹೇಳುತ್ತೇನೆ. ಇದಕ್ಕೆ ತಾವು ಉತ್ತರ ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಲ್ಲಿಯವರೆಗೆ ಯಾವ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದ್ದಾರೋ ಅದೇ ಬೇಸಿಸ್ ಮೇಲೆ ನಾವು ಆಣೆವಾರಿ ಮಾಡುತ್ತಿದ್ದೇವೆ. ಮತ್ತೆ ಬೇರೆ ಏನಾದರೂ ಹೊಸ ವಿಧಾನ ಹೇಳಿದರೆ ಅದರ ಪ್ರಕಾರ ಬೇಕಾದರೆ ನಾವು ಆಣೆವಾರಿ ಮಾಡುವುದಕ್ಕೆ ಪರಿಶೀಲಿಸುತ್ತೇವೆ. ಆಣೆವಾರಿಯನ್ನು ಸರಿಯಾಗಿ ಮಾಡುವುದಕ್ಕೆ ಹೊಸ ಮೆಥೆಡ್ ಇದ್ದರೆ ಹೇಳಿ.

ಅಧ್ಯಕ್ಷರು.—ಇದಕ್ಕೆ ತಾವು ಹೊಸ ವಿಧಾನವನ್ನು ಹೇಳಿದರೆ ಅದನ್ನು ಮಂತ್ರಿಗಳು ಕನ್ಸಿಡರ್ ಮಾಡುತ್ತಾರೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.—ಬೆಳೆಯನ್ನು ಆಧಾರವಾಗಿ ಇಟ್ಟುಕೊಳ್ಳಬೇಕು. ಬೆಳೆಯ ಆಧಾರದ ಮೇಲೆ ಆಣೆವಾರಿ ಮಾಡಬಾರದು. ಯಾವ ಅವಧಿಯಲ್ಲಿ ಬೆಳೆಯನ್ನು ರೈತರು ಬೆಳೆದಿರುತ್ತಾರೋ ಅದನ್ನು ತಿಳಿದುಕೊಂಡು ಆಣೆವಾರಿ ಮಾಡಬೇಕು. ಇಂತಿಷ್ಟು ಬೆಳೆ ಬಂದರೆ ಮಾತ್ರ ಇದನ್ನು ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಅವರು ಸಲಹೆ ಕೊಟ್ಟಿದ್ದಾರೆ. ತಮಗೂ ಮತ್ತು ಅಗ್ರಿಕಲ್ಚರಲ್ ಇಲಾಖೆಯ ಸೆಕ್ರೆಟರಿಯವರಿಗೂ, ರೆವಿನ್ಯೂ ಸೆಕ್ರೆಟರಿಯವರಿಗೂ ಸೇರಿಸಿ ಇದರ ಬಗ್ಗೆ ಒಂದು ಎಕ್ಸಾಮಿನ್ ಮಾಡಿಸುತ್ತೇವೆ.

ಶ್ರೀಮತಿ ಚಂದ್ರಪ್ರಭಾ ಅರಸ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರಿಗೆ ನಾನು ಕೇಳಬಯಸುವದಿಷ್ಟೆ, ಈ ರಾಜ್ಯದಲ್ಲಿ ತಡವಾಗಿಯಾದರೂ ದೀಪಾವಳಿ ಸಮಯದಲ್ಲಿ ಕೆಲವು ಕಡೆ ಮಳೆಯಾಗಿದೆ ಆದರೂ ಕೆರೆಕಟ್ಟೆಗಳಲ್ಲಿ ಸಾಕಷ್ಟು ದನಕರುಗಳಿಗೆ ಕುಡಿಯುವ ನೀರು ಬಂದಿಲ್ಲ ಮತ್ತು ಕೆಲವು ಭಾಗದಲ್ಲಿ ಆದರಲ್ಲೂ ಮೈಸೂರು ಜಿಲ್ಲೆಯಲ್ಲಿ ಶೇಕಡಾ ೧೦೦ ಭಾಗದಷ್ಟು ಬೆಳೆಗಳು ನಷ್ಟವಾಗಿದೆ. ಹಿಂಗಾರು ಬೆಳೆ ಮಾಡುವಂಥ ಪರಿಸ್ಥಿತಿಯಲ್ಲಿ ರೈತರುಗಳಿಲ್ಲ. ಈಗ ಭೂಮಿಯನ್ನು ಹದಗೊಳಿಸುವುದಕೆ ಉಳುಮೆ ಮಾಡಲಹುದೇ ವಿನಃ ಬೆಳೆ ಬರತಕ್ಕಂಥ ಯಾವುದೇ ದ್ವಿದಳ ಧಾನ್ಯಗಳನ್ನಾಗಲಿ ಹುರುಳಿ ಇನ್ನಿತರ ಧಾನ್ಯಗಳನ್ನಾಗಲಿ ಹಾಕುವಂಥ ಪರಿಸ್ಥಿತಿ ಇಲ್ಲ. ಇದರ ಬಗ್ಗೆ ನಾನು ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ರೆವಿನ್ಯೂ ಇಲಾಖೆ ಅಧಿಕಾರಿಗಳೊಡನೆ ಚರ್ಚೆ ಮಾಡಿದ್ದೇನೆ. ಆದ್ದರಿಂದ ಮಾನ್ಯ ಕಂದಾಯ ಸಚಿವರು ಮತ್ತು ಕೃಷಿ

ಸಚಿವರು ಈ ಕಡೆ ಸ್ವಲ್ಪ ಹೆಚ್ಚಿನ ಗಮನ ಹರಿಸಿ ಈ ಬರ ಪರಿಹಾರ ಕಾಮಗಾರಿಗಳನ್ನು ಮುಂದುವರಿಸಬೇಕು... ಈಗ ಜತ್ತನೆ ಬೀಜಗಳನ್ನು ಕೊಟ್ಟರು ಕೂಡಾ ರೈತರುಗಳು ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗದಂಥ ಪರಿಸ್ಥಿತಿ ಕೆಲವು ಕಡೆ ಇದೆ. ಆದ್ದರಿಂದ ರೆವಿನ್ಯೂ ಇಲಾಖೆಯು ಅಧಿಕಾರಿಗಳಿಂದ ಲೇಟೆಸ್ಟ್ ರಿಪೋರ್ಟ್‌ನ್ನು ತರಿಸಿಕೊಂಡು, ಬರುವಷ್ಟರಲ್ಲಿ ಈ ಬರ ಪರಿಹಾರ ಕೆಲಸಗಳನ್ನು ಮುಂದುವರಿಸುವಂತೆ ಹಾಗೂ ಜತ್ತನೆ ಬೀಜಗಳನ್ನು ಎಲ್ಲಿಗೆ ಬೇಕೋ ಅಲ್ಲಿಗೆ ಸಪ್ಲೈ ಮಾಡುವಂತೆ ಕ್ರಮ ಕೈಗೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ. ಮಲ್ಲಿಕಾರ್ಜುನ ಖಿರ್ಗೆ.—ಅಧಿಕಾರಿಗಳ ಕೊರ್ವಂಥ ಎಲ್ಲಾ ಸಲಹೆಗಳನ್ನು ನಾನು ಪರಿಶೀಲಿಸುತ್ತೇನೆ. ಈಗಾಗಲೇ ಕೆಲವು ಕಡೆ ಸಹಾಯ ಮಾಡುತ್ತಿದ್ದೇವೆ. ಈ ಬಗ್ಗೆ ಗಮನ ಕೂಡ ಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಖಂಡಿತವಾಗಿ ಈ ಬಗ್ಗೆ ಗಮನ ಕೊಡುತ್ತೇವೆ

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ.—ಸನ್ಮಾನ್ಯ ಸಭಾಧ್ಯಕ್ಷರೇ, ಸನ್ಮಾನ್ಯ ಮಂತ್ರಿಗಳು ಒಂದು ನಿರ್ದಿಷ್ಟ ಪ್ರದೇಶವನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸುವ ಬಗ್ಗೆ ವಾಸ್ತವಾಂಶಗಳನ್ನು ಪಟ್ಟಿ ಮಾಡಿ ಹೇಳಿದ್ದಾರೆ. ನಾನು ಹೇಳುವುದಕ್ಕೆ ಇಚ್ಛಿಸುವ ಅಂಶ ಏನೆಂದರೆ, ವಾಸ್ತವಾಂಶಗಳನ್ನು ಅವರು ಗುರುತಿಸುವುದಕ್ಕೆ ಆಳವಡಿಸಿಕೊಂಡಿರುವಂಥ ಪದ್ಧತಿ ಬಗ್ಗೆ ದೋಷಪೂರ್ಣವಾಗಿದೆ. ಈಗ ಒಂದು ಗಿಂ ದಿವಸದ ಕೆಳಗೆ ಹಿಂದಿನ ಕಂದಾಯ ಮಂತ್ರಿಗಳು ಒಂದು ಸಭೆಯನ್ನು ಕರೆದಿದ್ದರು. ಆಗ ಇವನ್ನು ಯಾವ ರೀತಿ ಪತ್ತೆ ಮಾಡುತ್ತೀರಿ, ರೈನ್ ಫಾರ್ ಸ್ಯಾಟಲೈಟಿಕ್ ಮೇಲೆ ಪತ್ತೆ ಮಾಡುತ್ತೀರಾ ಎಂದು ಕೇಳಿದೆ. ಅದಕ್ಕೆ ಕಂದಾಯ ಕಾರ್ಯದರ್ಶಿಗಳು ನಮಗೆ ಸ್ಯಾಟಲೈಟ್ ಫೋಟೋಗ್ರಾಫ್‌ನ್ನು ತೋರಿಸಿದರು. ಸ್ಯಾಟಲೈಟ್ ಫೋಟೋಗ್ರಾಫ್ ಮೂಲಕ ಇವನ್ನು ನಾವು ಪತ್ತೆ ಮಾಡುತ್ತೇವೆಂದು ಹೇಳಿದರು. ನಾನು ಅವರಿಗೆ ಹೇಳಿದೆ. ಈಗಾಗಲೇ ನದ್ದಾಲ್ಲಿ ಮಿನಿ ಸೆಟಲೈಟ್ಸ್ ಇವೆ. ನಾನು ಯಾರನ್ನು ಮಿನಿಸೆಟ್‌ಲೈಟ್ ಎಂದೂ ಕರೆದಿದ್ದೇನೆ ಎಂಬುದು ಮಾನ್ಯ ಕಂದಾಯ ಸಚಿವರಿಗೆ ಗೊತ್ತು. ಈ ವಿಲೇಜ್ ಅಕೌಂಟೆಂಟ್ ಏನಿದ್ದಾನೆ ಅವನು ಭೂಮಿಯು ಹತ್ತಿರ, ಬೆಳೆಯ ಹತ್ತಿರ ಹೋಗುವುದಿಲ್ಲ. ಅಷ್ಟೇ ಅಲ್ಲ, ಸಂಬಂಧಪಟ್ಟ ತನ್ನ ಗ್ರಾಮದಲ್ಲಿಯೇ ಇರುವುದಿಲ್ಲ. ಆತನು ಊರಿನ ಆಚೆಗೆ ರಿಪೋರ್ಟ್ ಸೆಟ್ಟಿಂಗ್ ಮಾಡಿಕೊಂಡು ಕುಳಿತಿರುತ್ತಾನೆ. ಅಲ್ಲಿ ಅಣಿಪಾರಿ ಮಾಡುತ್ತಾ ಇರುತ್ತಾನೆ. ಕಂದಾಯ ಇಲಾಖಾ ಕಾರ್ಯದರ್ಶಿಯವರು ಇಂಡಿಯಾ ದೇಶದ ಸೆಟಿಲೈಟ್ ಫೋಟೋಗ್ರಾಫ್‌ನ್ನು ನಮಗೆ ತೋರಿಸುತ್ತಾರೆ. ಅದರಲ್ಲಿ ನಾವು ಸಣ್ಣ ಧಾನ್ಯದ ತಾಲ್ಲೂಕನ್ನು ಹುಡುಕಬೇಕು. ಅದರಲ್ಲಿ ಪಚ್ಚೆ, ಹೂವು ಕಾಣಿ ಉಸುರುವುದನ್ನು ಉಸುರಿ ಹೋಗಿರುವುದನ್ನೂ ಕೂಡ ನಾವೇ ಗುರುತಿಸಬೇಕು. ಈ ರೀತಿಯಲ್ಲಿ ನಿಮ್ಮ ಇಲಾಖೆಯು ಪದ್ಧತಿ ಕಾರ್ಯಕ್ರಮವನ್ನು ಅಳವಡಿಸುತ್ತಿದ್ದಾರೆ. ಮೊದಲು ಅದನ್ನು ಕೈಬಿಡಬೇಕು. ಮೊದಲನೆಯದಾಗಿ ತಾವು ಮಾಡಬೇಕಾಗಿರುವುದು ಏನೆಂದರೆ, ಈ ವಿಲೇಜ್ ಅಕೌಂಟೆಂಟ್ಸ್ ಅಯಾಯ ಗ್ರಾಮದಲ್ಲಿ ಕಡ್ಡಾಯವಾಗಿ ಇರಲೇಬೇಕು. ಒಂದು ವೇಳೆ ಅವನು ಇಲ್ಲದಿದ್ದರೆ ಅವನನ್ನು ಪಾತ್ರ ಮಾಡಬೇಕು. ಎರಡನೇಯದು, ಬೆಳೆಯ ಆಧಾರದ ಮೇಲೆ ಬರಗಾಲ ಪ್ರದೇಶವನ್ನು ತೀರ್ಮಾನ ಮಾಡಬೇಕು. ಸ್ಯಾಂಪಲ್ ಕ್ರಾಪ್‌ಕಟ್ಟಿಂಗ್ ಎಕ್ಸ್‌ಪೇರಿಮೆಂಟ್ಸ್ ಮಾಡಲೇಬೇಕು. ಆ ಕಾರಣದಿಂದ ತಾವು ಆ ಕ್ರಮ ತೆಗೆದುಕೊಂಡರೆ ಅನುಕೂಲವಾಗುತ್ತದೆ. ಏಕೆಂದರೆ, ನೀರಾವರಿ ಪ್ರದೇಶ ಒಂದನ್ನು ಬಿಟ್ಟು ಬೇರೆ ಎಲ್ಲಾ ಮಳೆ ಆಧಾರಿತ ಪ್ರದೇಶವೂ ಬರಗಾಲ ಪೀಡಿತಪ್ರದೇಶವಾಗಿದೆ ಇದಕ್ಕೆ ಕಾರಣ ಅಕಾಲ ಮಳೆಯಿಂದಾಗಿ. ದಯವಿಟ್ಟು ತಾವು ಈ ವಿಚಾರವನ್ನು ಮಾಡಿ.

ಅಧ್ಯಕ್ಷರು.—ಸದನದಲ್ಲಿ ಬರಗಾಲದ ಕುರಿತು ಡಿಸ್‌ಕಷನ್ ಪ್ರಾರಂಭವಾಗುತ್ತದೆ. ಆಗ ಎಲ್ಲಾ ವಿಚಾರಗಳೂ ಕೂಡ ಪ್ರಸ್ತಾಪ ಮಾಡಬಹುದು. ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಅನಿಸಿಕೆಗಳನ್ನು ಏನು ಹೇಳಬೇಕೆಂದಿದ್ದಾರೆ ಆಗ ಅವರೆಲ್ಲರಿಗೂ ಅವಕಾಶ ಸಿಗುತ್ತದೆ

ದೇವಸ್ಥಾನಗಳಿಗೆ ಸಹಾಯಧನ

೨೬೯ ಶ್ರೀ ಬಸವರಾಜು (ಬ್ರಹ್ಮಾವರ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ತಿಳಿಸುವರೆ :

(ಅ) ಮಾಜರಾಯಿ ಇಲಾಖೆಯಿಂದ ದಕ್ಷಿಣ ಕನ್ನಡದಲ್ಲಿ ನೋಂದಾಯಿತವಾದ ದೇವಸ್ಥಾನಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರ ನೀಡುವುದು)